ಆ) ಭಾರತ ಸರ್ಕಾರದ ಪರಿಸರ ಇಲಾಖೆಯು ರೂಪಿಸಿರುವ ಎಂಎಸ್‌ಡಬ್ಲ್ಯೂ ನಿಯಮಗಳು 2000 ದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ತ್ಯಾಜ್ಯ ವಸ್ತುಗಳ ನಿರ್ವಹಣೆಯನ್ನು ಮಾಡಬೇಕಾಗಿರುತ್ತದೆ. ಅದರಂತೆ, ಕೆಳಕಂಡ ಕ್ರಮ ಕೈಗೊಳ್ಳಲಾಗುತ್ತಿದೆ.

1. ಪಾಲಿಕೆಯು ಖಾಸಗಿ ಸಹಭಾಗಿತ್ವದೊಂದಿಗೆ ತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ 1000 ಟನ್‌ಗಳಷ್ಟು ವಿಲೇವಾರಿಯನ್ನು ಪ್ರತಿದಿನ ನಿರ್ವಹಿಸಲು ಮೆ:ರಾಂಕಿ ಲಿ., ಹೈದರಾಬಾದ್ ಸಂಸ್ಥೆಯೊಂದಿಗೆ ಸ್ಯಾನಿಟರಿ ಲ್ಯಾಂಡ್ ಫಿಲ್ ಸ್ಥಾಪಿಸಲು ಹಾಗೂ ಪ್ರತಿ ಟನ್ನಿಗೆ 198 ರೂಗಳ ಟಿಪ್ಪಿಂಗ್ ಫೀಯನ್ನು ಅಂತಿಮವಾಗಿ ನೆಲದಲ್ಲಿ ಹೂಳಬಹುದಾದ ತ್ಯಾಜ್ಯ ವಸ್ತುಗಳಿಗೆ ಪಾವತಿಸಲು ಒಪ್ಪಂದವಾಗಿದ್ದು, ತ್ಯಾಜ್ಯ ವಸ್ತುಗಳ ವೈಜ್ಞಾನಿಕ ಸಂಸ್ಕರಣೆ ಹಾಗೂ ತಿರಸ್ಕರಿಸಲ್ಪಲಡುವ ತ್ಯಾಜ್ಯ ವಸ್ತುಗಳನ್ನು ಹೂಳುವ ಪ್ರಕ್ರಿಯೆಯು 2005ರ ಡಿಸೆಂಬರ್ ಅಂತ್ಯದೊಳಗಾಗಿ ಪ್ರಾರಂಭವಾಗಲಿದೆ.

2. ಪಾಲಿಕೆಯು ಪ್ರಸ್ತುತ 350 ಟನ್‌ಗಳಷ್ಟು ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಬೊಮ್ಮನಹಳ್ಳಿ ಇಲ್ಲಿಗೆ ಸಾಗಿಸಲಾಗುತ್ತಿದ್ದು, ಕಾಂಪೋಸ್ಟ್ ಹಾಗೂ ವರ್ಮಿ (ಎರೆಹುಳು ಗೊಬ್ಬರ) ಕಾಂಪೋಸ್ಟ್ ಅನ್ನು ಪ್ರತಿ ದಿನ ಸಂಸ್ಕರಣೆಯ ನಂತರ ಉತ್ಪಾದಿಸಲಾಗುತ್ತಿದೆ.

3. ಪಾಲಿಕೆಯ ಪ್ರತಿ ದಿನ 1000 ಟನ್‌ಗಳಷ್ಟು ಪ್ರಮಾಣದ ತ್ಯಾಜ್ಯ ವಸ್ತುಗಳನ್ನು ಬಳಸಿ ತ್ಯಾಜ್ಯ ವಸ್ತುಗಳಿಂದ ಹರಳುಗಳನ್ನು ಉತ್ಪಾದಿಸಿ ವಿದ್ಯುತ್ ತಯಾರಿಸುವ ಪ್ರಸ್ತಾವನೆಯನ್ನು ಖಾಸಗಿ ಸಹಭಾಗಿತ್ವದೊಂದಿಗೆ 'ಬಿಒಟಿ' (ನಿರ್ಮಾಣ–ನಿರ್ವಹಣೆ–ಹಸ್ತಾಂತರ) ಆಧಾರದ ಮೇಲೆ ನಿರ್ವಹಿಸಲು ಪಾಲಿಕೆಯ ನಿರ್ಣಯವಾಗಿದ್ದು. ಪ್ರಸ್ತಾವನೆಯು ಒಪ್ಪಂದದ ಹಂತದಲ್ಲಿರುತ್ತದೆ. ಇದಕ್ಕಾಗಿ 170 ಎಕರೆಗಳ ಪ್ರದೇಶವನ್ನು ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಗುರುತಿಸಲಾಗಿದೆ.

4. ನಗರದ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿರುವ ಅಂಶವನ್ನು ಗಮನದಲ್ಲಿಟ್ಟುಕೊಂಡು ದೂರಗಾಮಿ ದೃಷ್ಟಿಯಿಂದ ನಗರದ ಹೊರ ವಲಯದ ವಿವಿಧ ಪ್ರದೇಶಗಳಲ್ಲಿ ಜಾಗವನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ವೈಜ್ಞಾನಿಕ ವಿಲೇವಾರಿಗಾಗಿ ವಿವಿಧ ಕ್ರಮಗಳನ್ನು ಅಳವಡಿಸಲಾಗುತ್ತಿದೆ.

1066(1423) ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ಪಶ್ಚಿಮ ಕಾರ್ಡ್ ರಸ್ತೆಯ ಗ್ರೇಡ್ ಸಪರೇಟರ್ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಇದರ ಅಂದಾಜು ವೆಚ್ಚವೆಷ್ಟು ;

ಇ) ಈ ಕಾಮಗಾರಿ ಯಾವಾಗ ಪೂರ್ಣ ಗೊಳ್ಳಬೇಕಾಗಿತ್ತು, ಯಾವಾಗ ಪೂರ್ಣಗೊಳಿಸಲಾಗುವುದು;

ಈ) ಇದಕ್ಕಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು;

ಉ) ಈ ಕಾಮಗಾರಿಯನ್ನು ಯಾರಿಗೆ ನೀಡಲಾಗಿದೆ.

ಊ) ಈ ಕಾಮಗಾರಿಯ ಇತ್ತೀಚಿನ ಪ್ರಗತಿಯ ವಿವರಗಳನ್ನು ನೀಡುವುದು;

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ಪಶ್ಚಿಮ ಕಾರ್ಡ್ ರಸ್ತೆಯ ಗ್ರೇಡ್ ಸಪರೇಟರ್ ಕಾಮಗಾರಿಯನ್ನು ಫೆಬ್ರವರಿ 2004ರಲ್ಲಿ ಪ್ರಾರಂಭಿಸಲಾಯಿತು.

ಆ) ರೂ. 15.00 ಕೋಟಿಗಳು.

ಇ) ಆಗಸ್ಟ್ 2005.

ಈ) ರೂ.4.60 ಕೋಟಿಗಳು.

ಉ) ಈ ಕಾಮಗಾರಿಯನ್ನು 'ಮೆ : ಈಸ್ಟ್ ಕೋಸ್ಟ್ ಕನ್ಸಟ್ರಕ್ಷನ್ಸ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್ ರವರಿಗೆ ನೀಡಲಾಗಿದೆ.

ಊ) ನೀರಿನ ಮತ್ತು ಒಳಚರಂಡಿ ಕೊಳವೆ ವಿದ್ಯುತ್ ಟೆಲಿಫೋನ್ ಕೇಬಲ್ ಸ್ಥಳಾಂತರಿಸುವ ಹಾಗೂ ಮರಗಳನ್ನು ಕತ್ತರಿಸುವ ಕೆಲಸಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಯಶವಂತಪುರ ಕಡೆಯ ರ್ಯಾಂಪಿನ ಮಣ್ಣು ಕೆಲಸ ಮುಗಿಸಿ 217 ಮೀ ಉದ್ದದ ಕಾಂಕ್ರೀಟ್ ಗೋಡೆಯ ಕೆಲಸ ಮುಗಿದಿರುತ್ತದೆ. ಹಾಗೂ ಮಧ್ಯದ ಬಾಕ್ಸ್ ಸ್ಥಳದಲ್ಲಿ ಮಣ್ಣು ಕೆಲಸ ಪ್ರಗತಿಯಲ್ಲಿದೆ ಒಟ್ಟಾರೆ ಶೇ. 35 ರಷ್ಟು ಕೆಲಸ ಮುಗಿದಿದೆ.

1068(1019) ಶ್ರೀ ಜಿ.ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆ ಗೌರಿಬಿದನೂರು ನಗರಗೆರೆ ಹೋಬಳಿಯ ಕೇಂದ್ರಸ್ಥಾನದಲ್ಲಿ ಪೊಲೀಸ್ ಠಾಣೆ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಇದ್ದಲ್ಲಿ ಸರ್ಕಾರದ ಕ್ರಮಗಳೇನು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಪ್ರಸ್ತುತ ಈ ಅವಶ್ಯಕತೆ ಕಂಡುಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

1037(1393) ಶ್ರೀಮತಿ ಸುನಿತ ವೀರಪ್ಪಗೌಡ ಜೆ.(ಬನ್ನೂರು) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬನ್ನೂರು ಪಟ್ಟಣದಲ್ಲಿ ಕೆ.ಎಸ್.ಆರ್.ಟಿ.ಸಿ.ಬಸ್ ನಿಲ್ದಾಣವಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

1073(1394) ಶ್ರೀಮತಿ ಸುನೀತ ವೀರಪ್ಪಗೌಡ ಜೆ.(ಬನ್ನೂರು) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮುಡುಕುತೊರೆ ಏತ ನೀರಾವರಿ ಯೋಜನೆ ನಿಂತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;